**ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ ನೃಪತುಂಗ ರಸ್ತೆ ಬೆಂಗಳೂರು-1**

ಸಿ4(5) ಚಿ.ಶಿ.ಜೇ.08 / 12:13 ದಿನಾಂಕ: 16-02-2015

ಗೆ,

**ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರುಗಳಿಗೆ (ಆಡಳಿತ)**

ಸಾರ್ವಜನಿಕ ಶಿಕ್ಷಣ ಇಲಾಖೆ

**ವಿಷಯ: ಸರ್ಕಾರಿ ಪ್ರೌಢಶಾಲಾ ಚಿತ್ರ ಕಲಾ ಶಿಕ್ಷಕರ ಜೇಷ್ಠತಾ ಪಟ್ಟಿ ಬಗ್ಗೆ.**

---

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಸರ್ಕಾರಿ ಪದವಿ ಪೂರ್ವ ಕಾಲೇಜು(ಪ್ರೌಢಶಾಲಾ ವಿಭಾಗ) ಮತ್ತು ಸರ್ಕಾರಿ ಪ್ರೌಢಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಚಿತ್ರಕಲಾ ಶಿಕ್ಷಕರ ಜೇಷ್ಠತಾ ಪಟ್ಟಿಗೆ ಸಂಬಂಧಿಸಿದಂತೆ ಅಂತಿಮ ಪಟ್ಟಿಯನ್ನು ಪ್ರಕಟಿಸಲು ಹಲವಾರು ತೊಡಕುಗಳು ಇರುತ್ತವೆ. ಈ ಹಿನ್ನಲೆಯಲ್ಲಿ ಆಯಾ ಜಿಲ್ಲೆಯ ಚಿತ್ರಕಲಾ ಶಿಕ್ಷಕರು ದಿನಾಂಕ: 21-02-2015 ರಂದು ಮೂರನೇ ಶನಿವಾರ ಉಪನಿರ್ದೇಶಕರ ಕಛೇರಿಯಲ್ಲಿ ನಡೆಯುವ ಮಾಸಿಕ ಸಭೆಯನ್ನು ಬಳಸಿಕೊಂಡು ತಮ್ಮ ಸೇವಾ ವಿವರಗಳೊಂದಿಗೆ ಬಂದು ನಿಮ್ಮ ಜಿಲ್ಲೆಯ ಕಛೇರಿಯು ಸಲ್ಲಿಸಿರುವ ಪಟ್ಟಿಯಲ್ಲಿನ ಲೋಪದೋಷಗಳನ್ನು ಸರಿಪಡಿಸಿ ಉಪನಿರ್ದೇಶಕರ ದೃಢೀಕರಣದೊಂದಿಗೆ ಸಂಘದ ಪದಾಧಿಕಾರಿಯೊಬ್ಬರು 23-02-2015ರಂದು ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇಲ್ಲಿಗೆ ಖುದ್ದಾಗಿ ಸಲ್ಲಿಸುವಂತೆ ತಿಳಿಸಿದೆ. ಬರುವ ಪದಾಧಿಕಾರಿಗಳಿಗೆ ಓ.ಓ.ಡಿ ಸೌಲಭ್ಯವನ್ನು ನೀಡುವಂತೆ ತಿಳಿಸಿದೆ. ಹಾಗೂ ಪ್ರಯಾಣ ಭತ್ಯವನ್ನು ಅವರ ಶಾಲಾ ಸಂಚಿತ ನಿಧಿಯಿಂದ ಪಡೆಯಲು ತಿಳಿಸಿದೆ.

ಸದರಿ ಮಾಹಿತಿ ಬಾರದಿದ್ದಲ್ಲಿ ಅದು ಆಯಾ ಜಿಲ್ಲೆಯ ಉಪನಿರ್ದೇಶಕರ ಜವಾಬ್ದಾರಿಯ ಮೇಲೆ ಅಂತಿಮ ಪಟ್ಟಿಯನ್ನು ಪ್ರಕಟಿಸಲಾಗುವುದು ಎಂದು ಈ ಮೂಲಕ ತಿಳಿಸಿದೆ.

E-mail: ddpi.edu.udupi@nic.in
Website: www.ddpiudupi.in

ನಿರ್ದೇಶಕರು(ಪ್ರೌಢಶಿಕ್ಷಣ)

ಸಂ:ಎ1:ಚಿ.ಜೇ.ಪಟ್ಟಿ:01:2014-15. ದಿನಾಂಕ:20.02.2015

ಮೇಲಿನ ಪತ್ರದಲ್ಲಿ ತಿಳಿಸಿರುವಂತೆ ಜಿಲ್ಲೆಯ ಸರಕಾರಿ ಪ್ರೌಢಶಾಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಚಿತ್ರಕಲಾ ಶಿಕ್ಷಕರಿಗೆ ಜ್ಯೇಷ್ಠತಾ ಪಟ್ಟಿಗೆ ಸಂಬಂಧಿಸಿದ ಮಾಹಿತಿಯನ್ನು ಸರಿಪಡಿಸಲು ದಿನಾಂಕ:21.02.2014ರಂದು ಉಪನಿರ್ದೇಶಕರ ಕಛೇರಿ , ರಜತಾದ್ರಿ ಉಡುಪಿ ಇಲ್ಲಿಗೆ ಹಾಜರಾಗಲು ತಿಳಿಸಿ ಕರ್ತವ್ಯದಿಂದ ಬಿಡುಗಡೆಗೊಳಿಸಲು ಸಂಬಂಧಿಸಿದ ಶಾಲಾ ಮುಖ್ಯಸ್ಥರಿಗೆ ಅನುಮತಿ ನೀಡಿದೆ.

ರಿಗೆ,

1) ಜಿಲ್ಲೆಯ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಯವರಿಗೆ
2) ಸಂಬಂಧಿಸಿದ ಸರಕಾರಿ ಪ್ರೌಢಶಾಲಾ ಮುಖ್ಯಸ್ಥರಿಗೆ
3) ಸಂಬಂಧಿಸಿದ ಚಿತ್ರಕಲಾ ಶಿಕ್ಷಕರಿಗೆ ಶಾಲಾ ಮುಖ್ಯಸ್ಥರ ಮೂಲಕ

**ಉಪನಿರ್ದೇಶಕರು (ಆಡಳಿತ)**
**ಸಾರ್ವಜನಿಕ ಶಿಕ್ಷಣ ಇಲಾಖೆ**
**ರಜತಾದ್ರಿ, ಉಡುಪಿ ಜಿಲ್ಲೆ.**